ಫ್ಯಾಕ್ಸ್: 08282-256262 ☎ 08282-256148 (ಪ್ರಾಧಿಕಾರಗಳ ವಿಭಾಗ)
ಇ-ಮೇಲ್:drsyndicateku@gmail.com ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-1:13(5)-20: 139 :2021-22 ದಿನಾಂಕ:07-08-2021 09

ಮಾನ್ಯರೆ,

ವಿಷಯ: ದಿನಾಂಕ:14-07-2021ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ- III ರ ಪ್ರಕರಣ- 16 ರನ್ವಯ ದಿನಾಂಕ:14-07-2021 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-IIIರ ಪ್ರಕರಣ - 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

**ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.**

ತಮ್ಮ ವಿಶ್ವಾಸಿ,

(ಅನುರಾಧ ಜಿ.)
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ 7/8/21
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 14-07-2021

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:14-07-2021 ರಂದು ಬುಧವಾರ ಪೂರ್ವಾಹ್ನ: 11.00 ಗಂಟೆಗೆ ವಿಶ್ವವಿದ್ಯಾಲಯದ ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

ಹಾಜರಾದ ಸದಸ್ಯರು:

1. ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು — ಅಧ್ಯಕ್ಷರು
2. ಪ್ರೊ. ಎಸ್.ಎಸ್. ಪಾಟೀಲ್, ಕುಲಸಚಿವರು — ಸದಸ್ಯ ಕಾರ್ಯದರ್ಶಿಗಳು
3. ಪ್ರೊ. ಪಿ. ಕಣ್ಣನ್, ಕುಲಸಚಿವರು (ಮೌಲ್ಯಮಾಪನ) — ಸದಸ್ಯರು
4. ಶ್ರೀ ಕೆ.ಸಿ. ವೀರಭದ್ರಯ್ಯ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ — ಸದಸ್ಯರು
5. ಶ್ರೀ ಎನ್. ಆರ್. ಮಂಜುನಾಥ — ಸದಸ್ಯರು
6. ಶ್ರೀ ಹೆಚ್. ಬಿ. ರಮೇಶಬಾಬು — ಸದಸ್ಯರು
7. ಶ್ರೀ ಬಳ್ಳೇಕೆರೆ ಸಂತೋಷ್ — ಸದಸ್ಯರು
8. ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ — ಸದಸ್ಯರು
9. ಶ್ರೀ ಧರ್ಮ ಪ್ರಸಾದ್ ಜಿ. — ಸದಸ್ಯರು
10. ಶ್ರೀ ರಾಮಲಿಂಗಪ್ಪ ಹೆಚ್. — ಸದಸ್ಯರು
11. ಶ್ರೀ ಎಸ್. ಆರ್. ನಾಗರಾಜ್ — ಸದಸ್ಯರು
12. ಪ್ರೊ. ಕೃಷ್ಣ ವಿ., ಪ್ರಾಧ್ಯಾಪಕರು — ಸದಸ್ಯರು
13. ಡಾ. ಗೀತಾ ಸಿ., ಡೀನರು — ಸದಸ್ಯರು
14. ಡಾ. ಯುವರಾಜ ಬಿ. ಹೆಚ್. ಪ್ರಾಂಶುಪಾಲರು — ಸದಸ್ಯರು
15. ಶ್ರೀ ಕರುಣಾಕರ ಬಿ., ಪ್ರಾಂಶುಪಾಲರು — ಸದಸ್ಯರು
16. ಡಾ. ಹೆಚ್. ರಾಜೇಶ್ವರಿ, ಪ್ರಾಂಶುಪಾಲರು — ಸದಸ್ಯರು

ಗೈರುಹಾಜರಾದ ಸದಸ್ಯರು:

1) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
4) ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5) ಶ್ರೀ ಬಿ. ನಿರಂಜನ ಮೂರ್ತಿ

ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು

ಪ್ರಸ್ತಾವನೆ: ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಪತಿಯವರು ಆತ್ಮೀಯವಾಗಿ ಸ್ವಾಗತ ಕೋರಿದರು. ಡೀನರ ಜೇಷ್ಠತೆಯ ಆಧಾರದ ಮೇರೆಗೆ ಸಿಂಡಿಕೇಟಿಗೆ ನೂತನವಾಗಿ ನಾಮನಿರ್ದೇಶನಗೊಂಡ ಪ್ರಾಧ್ಯಾಪಕರಾದ ಡಾ. ಗೀತಾ ಸಿ., ಡೀನರು, ಶಿಕ್ಷಣ ನಿಕಾಯ ಹಾಗೂ ಪ್ರಾಧ್ಯಾಪಕರ ಜೇಷ್ಠತೆಯ ಆಧಾರದ ಮೇರೆಗೆ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡ ಪ್ರೊ. ವಿ. ಕೃಷ್ಣ, ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ವಿಭಾಗ ಇವರನ್ನು ಮಾನ್ಯ ಕುಲಪತಿಗಳು ಆತ್ಮೀಯವಾಗಿ ಸ್ವಾಗತಿಸಿದರು.

ಮುಂದುವರೆದು, ಪ್ರಾಸ್ತಾವಿಕವಾಗಿ ಮಾತನಾಡಿದ ಕುಲಪತಿಗಳು ಕಾರಣಾಂತರಗಳಿಂದ ಈ ಸಭೆಯನ್ನು ಸುಮಾರು ಮೂರು ತಿಂಗಳ ಅವಧಿಯ ನಂತರ ಕರೆಯುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಈ ರೀತಿ ವಿಳಂಬ ಆಗದಂತೆ ನೋಡಿಕೊಳ್ಳಲಾಗುವುದು ಹಾಗೂ ಒಂದು ವಿಶೇಷ ಸಭೆಯನ್ನು ಕರೆಯಲಾಗುವುದು ಎಂದು ಸಭೆಗೆ ತಿಳಿಸಿದರು.

ಕೆಲವು ದಿನಗಳ ಹಿಂದೆ ಉನ್ನತ ಶಿಕ್ಷಣ ಪರಿಷತ್ ಸಭೆಯನ್ನು ಕರೆಯಲಾಗಿತ್ತು. ಅಲ್ಲಿ ಹೊಸ ಶಿಕ್ಷಣ ನೀತಿಯ ಕುರಿತು ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಈ ದಿಸೆಯಲ್ಲಿ ಎಲ್ಲಾ ವಿಶ್ವವಿದ್ಯಾಲಯದ ಅಧ್ಯಾಪಕ ಹಾಗೂ ಅಧ್ಯಾಪಕೇತರ ಸಿಬ್ಬಂದಿಯೊಂದಿಗೆ ಚರ್ಚಿಸಲಾಗುವುದು ಎಂದು ತಿಳಿಸಿದರು.

ಡಾ. ಅಬ್ದುಲ್ ಕಲಾಂರವರು ಹೇಳಿರುವಂತೆ ನಾವೆಲ್ಲರೂ ಇನ್ನೂ ಹೆಚ್ಚು ಸಕ್ರಿಯವಾಗಿ ಕಾರ್ಯ ನಿರ್ವಹಿಸಬೇಕಿದೆ. ಕಡೂರು, ಚಿಕ್ಕಮಗಳೂರು ಸ್ನಾತಕೋತ್ತರ ಕೇಂದ್ರಗಳಲ್ಲಿ ಹೊಸ ಕಟ್ಟಡಗಳ ನಿರ್ಮಾಣ ಆಗಬೇಕಿದೆ, ಅದರಂತೆ ಶಿಕಾರಿಪುರದಲ್ಲೂ ಹೊಸ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪನೆ ಮಾಡಬೇಕಾಗಿದೆ. ಇದಕ್ಕೆ ಸಿಂಡಿಕೇಟ್ ಸದಸ್ಯರೆಲ್ಲರ ಸಹಕಾರದಿಂದ ಇದನ್ನು ಆದಷ್ಟು ಬೇಗ ಜಾರಿಗೆ ತರಲಾಗುವುದು. North Corolina ವಿಶ್ವವಿದ್ಯಾಲಯದಲ್ಲಿ 27ನೇ ವಯಸ್ಸಿನ ಸಂಶೋಧಕ ಕೈಗೊಂಡ ಸಂಶೋಧನೆ ಇಡೀ ಜಗತ್ತಿಗೆ ಹೊಸ ಭರವಸೆ ಮೂಡಿಸಿದೆ. ಅಮರ್ತ್ಯಸೇನ್ ರವರು ಹೇಳಿರುವಂತೆ ನಮ್ಮ ಭಾರತೀಯರು ಸಾಕಷ್ಟು ಬುದ್ಧಿಜೀವಿಗಳು ಇದ್ದಾರೆ. ಆದರೆ ಅದನ್ನು ನಾವು ಹೇಗೆ ಸಾರ್ಥಕ ಪಡಿಸಿಕೊಳ್ಳಬೇಕು ಎಂಬುದು ಬಹಳ ಮಹತ್ವದ್ದಾಗಿದೆ. ಇತ್ತೀಚೆಗೆ ನಡೆಯುತ್ತಿರುವ ಆನ್-ಲೈನ್ ತರಗತಿಗಳಿಂದ ವಿದ್ಯಾರ್ಥಿಗಳ ಪ್ರತಿಭೆ ಹೊರ ಹೊಮ್ಮುವಲ್ಲಿ ಸ್ವಲ್ಪ ಹಿನ್ನೆಡೆಯಾಗಿದೆ. ನಮ್ಮ ವಿಶ್ವವಿದ್ಯಾಲಯವು ಸೈಮಾಗೊನಲ್ಲಿ 56 ನೇ ಸ್ಥಾನ ಪಡೆದಿರುವುದು ಹೆಮ್ಮೆಯ ಸಂಗತಿ, ಅದರಂತೆ NIRF, KSURF, ರ್ಯಾಂಕಿಂಗ್‌ನಲ್ಲಿಯೂ ಉತ್ತಮ ಸಾಧನೆ ಮಾಡುವ ನಿರೀಕ್ಷೆ ಇದೆ.

ಇಂದು ವಿಶ್ವವಿದ್ಯಾಲಯಗಳಲ್ಲಿ ಕೌಶಲ್ಯಾಭಿವೃದ್ಧಿಯಾಗುವುದು ಅವಶ್ಯವಾಗಿದೆ. ನಮ್ಮ ಪ್ರಧಾನಮಂತ್ರಿಗಳು ಇದನ್ನು ಇತ್ತೀಚೆಗೆ ಆಕಾಶವಾಣಿ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಈ ದಿಸೆಯಲ್ಲಿ ನಮ್ಮ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಲಾಗುವುದು. ನಮ್ಮ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಪ್ರಯತ್ನಿಸಲಾಗುವುದು. ಅಧ್ಯಾಪಕೇತರ ಹುದ್ದೆಗಳ ಮುಂಬಡ್ತಿಯ ಕುರಿತು ಅಂತಿಮ ತೀರ್ಮಾನವಾಗಿದ್ದು ಅದನ್ನು ಜಾರಿಗೆ ತರಲಾಗುವುದು.

ಅರಣ್ಯ ಇಲಾಖೆಯಿಂದ ವಿಶ್ವವಿದ್ಯಾಲಯದ ಜಮೀನಿನ ವಿಷಯ ಅಂತಿಮ ಹಂತದಲ್ಲಿದ್ದು ಅದೂ ಕೂಡ ಒಂದೆರಡು ವಾರಗಳಲ್ಲಿ ಇತ್ಯರ್ಥವಾಗುವ ಭರವಸೆ ಇದೆ. ನಂತರ ಇಲ್ಲಿನ ಅಪೂರ್ಣ ಕಟ್ಟಡಗಳನ್ನು ಪೂರ್ಣಗೊಳಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗುವುದು. ಹಾಗೂ ಸಹ್ಯಾದ್ರಿ ಕಾಲೇಜು ಆವರಣದಲ್ಲಿ ಸರ್ಕಾರದ ವತಿಯಿಂದ ಒಳಾಂಗಣ ಕ್ರೀಡಾ ಸಮುಚ್ಚಯ ಕಾರ್ಯಕ್ಕೆ ಎಲ್ಲಾ ಸಹಕಾರ ನೀಡಲಾಗುವುದು.

ಈ ಹಿಂದೆ ಕೈಗೊಂಡ ಕೆಲವು ತೀರ್ಮಾನಗಳಾದ EDGS, Open Book Exam ಇತ್ಯಾದಿಗಳನ್ನು ತಾಂತ್ರಿಕ ಕಾರಣಗಳಿಂದ ಹಿಂಪಡೆಯಲಾಗಿದೆ. ವಿಶ್ವವಿದ್ಯಾಲಯಕ್ಕೆ ಅಂತರರಾಷ್ಟ್ರೀಯ ಮಟ್ಟದ ಪರಿಣಿತರನ್ನು ಆಮಂತ್ರಿಸಲಾಗುವುದು. ಅಧ್ಯಾಪಕರಿಗೆ ಮುಂಬಡ್ತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಉತ್ತಮ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು. ಹಿಂದೆ ನಡೆದ ಎಲ್ಲಾ ಕಹಿ ಘಟನೆಗಳನ್ನು ಮರೆತು ಮುಂದೆ ಸಾಗಬೇಕಿದೆ. ಕೆಳದಿಯ ಅಭಿವೃದ್ಧಿಗೂ ಕ್ರಮ ವಹಿಸಲಾಗುವುದು. ಮುಂದಿನ ದಿನಗಳಲ್ಲಿ

ಚಿಕ್ಕಮಗಳೂರು ಕ್ಯಾಂಪಸ್‌ನ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು. ಹಿಂದೆ ನಡೆದ ಎಲ್ಲಾ ಕಹಿ ಘಟನೆಗಳನ್ನು ಮರೆಯುವಂತೆ ಮತ್ತೊಮ್ಮೆ ಕೋರಿದರು.

ಕಾರ್ಯಸೂಚಿಯನ್ನು ಪ್ರಾರಂಭಿಸುವ ಪೂರ್ವದಲ್ಲಿ ಕೋವಿಡ್ ಹಾಗೂ ಇತರೆ ಕಾರಣಗಳಿಂದ ವಿಶ್ವವಿದ್ಯಾಲಯದ ಕೆಲವು ಸಿಬ್ಬಂದಿಗಳು ಮತ್ತು ಅವರ ಕುಟುಂಬದವರು ನಿಧನರಾಗಿರುವುದಕ್ಕೆ ಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಬೇಕೆಂದು ಎಲ್ಲಾ ಸದಸ್ಯರನ್ನು ಮಾನ್ಯ ಕುಲಪತಿಗಳು ಕೋರಿದರು.

ಕುಲಸಚಿವರು ಮಾತನಾಡುತ್ತಾ ಇತ್ತೀಚೆಗೆ ಕೋವಿಡ್ ಮತ್ತು ಇತರೆ ಕಾರಣಗಳಿಂದ ವಿಶ್ವವಿದ್ಯಾಲಯದ ಈ ಕೆಳಕಂಡ ಅಧ್ಯಾಪಕ/ಅಧ್ಯಾಪಕೇತರ ಸಿಬ್ಬಂದಿಗಳು ಹಾಗೂ ಕೆಲವು ಸಿಬ್ಬಂದಿಗಳ ಕುಟುಂಬದ ಸದಸ್ಯರು ನಿಧನ ಹೊಂದುರುವುದಾಗಿ ಸಭೆಗೆ ವಿವರ ನೀಡಿದರು.

**ಸೇವಾವಧಿಯಲ್ಲಿರುವಾಗಲೇ ನಿಧನರಾದ ನೌಕರರುಗಳು:**

1. ಶ್ರೀ ಜಾವೀದ್, ಪ್ರಥಮ ದರ್ಜೆ ಸಹಾಯಕರು, ಎಸ್.ಎಂ.ಆರ್. ಕಾಲೇಜು
2. ಶ್ರೀಮತಿ ಮಂಜುಳಾಬಾಯಿ, ಕಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ
3. ಶ್ರೀ ಸುರೇಶ್ ವೈ. ಕಿರಿಯ ಸಹಾಯಕರು, ಮೈಕ್ರೋಬಯಾಲಜಿ ವಿಭಾಗ
4. ಶ್ರೀಮತಿ ಪುಷ್ಪಾ ಎಸ್. ಡಿ., ಶಾಖಾಧಿಕಾರಿಗಳು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ
5. ಶ್ರೀ ನಾಗರಾಜರಾವ್, ಸಹ ಪ್ರಾಧ್ಯಾಪಕರು ಯು.ಎಸ್.ಎಂ.ಆರ್ ಕಾಲೇಜು ಶಂಕರಘಟ್ಟ.

**ವಯೋನಿವೃತ್ತಿ ನಂತರ ನಿಧನ ಹೊಂದಿದವರು:**

1. ಶ್ರೀ ನಾರಾಯಣರಾವ್, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರು ಸಹ್ಯಾದ್ರಿ ಕಾಲೇಜು, ಶಿವಮೊಗ್ಗ.
2. ಶ್ರೀ ಪ್ರಕಾಶ್ ಜಿ.ಬಿ. ಪ್ರಥಮ ದರ್ಜೆ ಸಹಾಯಕರು ಎಸ್.ಪಿ.ಡಿ. ವಿಭಾಗ
3. ಶ್ರೀಮತಿ ಪದ್ಮಲತಾ ಎಲ್.ಎಸ್., ಶಾಖಾಧಿಕಾರಿ, ಎಸ್.ಪಿ.ಡಿ. ವಿಭಾಗ
4. ಡಾ. ಕೆ. ಆರ್. ಶಶಿರೇಖ, ನಿವೃತ್ತ ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.

**ಸೇವೆಯಲ್ಲಿರುವ ನೌಕರರ ಕುಟುಂಬದ ಸದಸ್ಯರು ನಿಧನರಾದ ವಿವರ:**

1. ಶ್ರೀಮತಿ ತನುಜ ಎಸ್.ಎಂ. (ಶ್ರೀ ಬಿ. ಬೆಳಕೇರಪ್ಪ, ಹಿರಿಯ ಸಹಾಯಕರು, ಹೆಚ್.ಆರ್.ಎಂ ವಿಭಾಗ ಇವರ ಪತ್ನಿ)
2. ಶ್ರೀಮತಿ ಶಾರದ (ಶ್ರೀ ಕೃಷ್ಣ ಡಿ. ಕಿರಿಯ ಸಹಾಯಕರು, ಸಿ.ಡಿ.ಸಿ. ವಿಭಾಗ, ಇವರ ಪತ್ನಿ)
3. ಶ್ರೀಮತಿ ನಾಗರತ್ನ ಡಿ. (ಶ್ರೀ ತಿಮ್ಮೇಗೌಡ, ಕಿರಿಯ ಸಹಾಯಕರು, ಸ್ನಾತಕೋತ್ತರ ಕೇಂದ್ರ ಚಿಕ್ಕಮಗಳೂರು, ಇವರ ಪತ್ನಿ)

ಮೇಲ್ಕಂಡ ಎಲ್ಲಾ ಮೃತರ ಆತ್ಮಕ್ಕೆ ಶಾಂತಿ ಕೋರಿ ಸಭೆಯಲ್ಲಿ 2 ನಿಮಿಷ ಮೌನ ಆಚರಿಸಲಾಯಿತು.

ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳುವ ಮುನ್ನ, ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಕೆಲವು ಘಟನೆಗಳು ನಡೆದಿವೆ, ನನಗೆ ಲಾಯರ್ ನೋಟೀಸ್ ಕಳುಹಿಸಿದ್ದಾರೆ ಎಂದರು. ಸಿಂಡಿಕೇಟ್ ಸದಸ್ಯರ ವ್ಯಾಪ್ತಿ ಏನು ಎಂಬುದನ್ನು ತಿಳಿಸುವುದು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಇವರು ಮಾತನಾಡುತ್ತಾ ಇಷ್ಟು ಬೆಳವಣಿಗೆಗಳು ಆದರೂ ಸಿಂಡಿಕೇಟ್ ಗಮನಕ್ಕೆ ತಂದಿರುವುದಿಲ್ಲ ಎಂದರು. ಶ್ರೀ ಹೆಚ್.ಬಿ. ರಮೇಶಬಾಬುರವರು ಮಾತನಾಡಿ ಆಗಬಾರದ ಘಟನೆ ಆಗಿಹೋಗಿದೆ ಸಿಂಡಿಕೇಟ್ ಸದಸ್ಯರ ಹಕ್ಕು ಏನು ? ಏಕೆ ? ಈ ಘಟನೆಯ ಕುರಿತು ಸಿಂಡಿಕೇಟ್ ಸದಸ್ಯರ ಅಧಿಕಾರ / ಜವಾಬ್ದಾರಿ ಏನು ಎಂದರು. ಅನ್‌ಲಾಕ್ ಆದರೂ ಸಿಂಡಿಕೇಟ್ ಸಭೆ ಕರೆಯಲಿಲ್ಲ. ಶ್ರೀ ಧರ್ಮಪ್ರಸಾದ್ ಜಿ. ಇವರು ಇದು ಶಾಸನಬದ್ಧ ಸಭೆ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಲೀಗಲ್

ನೋಟೀಸ್ ನೀಡಿರುವುದಾಗಿ ತಿಳಿಸಿದರು ಈ ನೋಟೀಸ್ ಬಗ್ಗೆ ವಿವರಿಸಬೇಕು ಹಾಗೂ ಸಿಂಡಿಕೇಟ್ ಸದಸ್ಯರ ಅಧಿಕಾರ ವ್ಯಾಪ್ತಿ ಏನು ಎಂದು ಕೇಳಿದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶಬಾಬುರವರು ಮಾನ್ಯ ಕುಲಪತಿಗಳು ಆತ್ಮಾವಲೋಕನ ಮಾಡಿಕೊಂಡು ಉತ್ತರ ನೀಡುವುದು. ಇದರಲ್ಲಿ ಯಾವುದೇ ವೈಯಕ್ತಿಕ ಹಿತಾಸಕ್ತಿ ಇಲ್ಲ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಮಾಡಬೇಕಾಗುತ್ತದೆ ಎಂದರು.

ನಂತರ ಸದಸ್ಯರಾದ ಶ್ರೀ ಕರುಣಾಕರ್ ಬಿ. ಇವರು ಮಾತನಾಡಿ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಹೇಳಿರುವುದು ಎಲ್ಲಾ ಮಾಧ್ಯಮದಲ್ಲಿ ಬಂದಿದೆ ಇದರ ಬಗ್ಗೆ ತಪ್ಪನ್ನು ಯಾರೇ ಮಾಡಿದರೂ ಅದು ತಪ್ಪೇ. ವಿಶ್ವವಿದ್ಯಾಲಯದ ಹಿತಾಸಕ್ತಿ ಅಡಗಿದೆ ಹಾಗೂ ವಿಶ್ವವಿದ್ಯಾಲಯದ ಹಿತಾಸಕ್ತಿಯಿಂದ ಈ ವಿಷಯವನ್ನು ಇಲ್ಲಿಗೇ ಮುಕ್ತಾಯಗೊಳಿಸುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್. ಇವರು ಮಾತನಾಡಿ ಸಿಂಡಿಕೇಟ್ ಸದಸ್ಯರ ಅಧಿಕಾರ ಏನು ಎಂಬುದನ್ನು ಸಭೆಗೆ ವಿವರಿಸುವಂತೆ ಮತ್ತೊಮ್ಮೆ ಕೋರಿದರು.

ಕೊನೆಯಲ್ಲಿ ಮಾನ್ಯ ಕುಲಪತಿಗಳು ಮಾತನಾಡಿ ನನ್ನ ಅಭಿಪ್ರಾಯವನ್ನು ಪ್ರಾಸ್ತಾವಿಕ ನುಡಿಯಲ್ಲೇ ತಿಳಿಸಿದ್ದೇನೆ ಎಂದು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ ಇವರು ಆದರೂ ವೈಯಕ್ತಿಕವಾಗಿ ನೋಟೀಸ್ ನೀಡಬಾರದಿತ್ತು ಎಂದರು. ಸದಸ್ಯರಾದ ಶ್ರೀ ಹೆಚ್.ಬಿ. ರಮೇಶಬಾಬುರವರು ಮಾತನಾಡಿ ತುರ್ತು ಸಿಂಡಿಕೇಟ್ ಸಭೆ ಕರೆದಿದ್ದರೆ ಚರ್ಚಿಸಬಹುದಿತ್ತು ಎಂದರು.

ಸದಸ್ಯರಾದ ಶ್ರೀ ಕರುಣಾಕರ್ ಬಿ., ಇವರು ಮಾತನಾಡಿ ಇನ್ನು ಮುಂದೆ ಹೀಗೆ ಆಗದ ರೀತಿಯಲ್ಲಿ ಮುಂದುವರೆಯುವುದು ಸೂಕ್ತ ಎಂದರು. ಸದಸ್ಯರಾದ ಶ್ರೀ ಹೆಚ್.ಬಿ. ರಮೇಶಬಾಬುರವರು ಇದಕ್ಕೆ ಪ್ರತ್ಯೇಕ ಸಭೆ ಕರೆಯಬೇಕು ಎಂದರು, ಇದಕ್ಕೆ ಪ್ರೊ. ವಿ. ಕೃಷ್ಣ ಮತ್ತು ಶ್ರೀ ಹೆಚ್.ಬಿ. ರಮೇಶಬಾಬು ಹಾಗೂ ಶ್ರೀ ಕರುಣಾಕರ್ ಬಿ., ರವರು ಧ್ವನಿಗೂಡಿಸಿದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥರವರು ಸಿಂಡಿಕೇಟ್ ನಿರ್ಣಯಗಳು ಸರಿಯಾಗಿ ಜಾರಿಯಾಗುತ್ತಿಲ್ಲ ಎಂದರು. ಇದಕ್ಕೆ ಉತ್ತರಿಸಿದ ಕುಲಪತಿಗಳು ಸಿಂಡಿಕೇಟ್ ಕೈಗೊಂಡ ಅನೇಕ ನಿರ್ಣಯಗಳನ್ನು ಅನುಷ್ಠಾನಗೊಳಿಸಿರುವುದಾಗಿ ಸಭೆಗೆ ವಿವರಿಸಿದರು.

ನಂತರದಲ್ಲಿ, ಸಭೆಯ ಕಾರ್ಯಸೂಚಿಯನ್ವಯ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

## ದಿನಾಂಕ:24-03-2021 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಿದ ವಿಷಯ

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2021-ಸಿಂ-2.08(ಬಿ):ವಿಚಾರಣಾ ಸಮಿತಿ ವರದಿ ಕುರಿತು.**

**ಚರ್ಚೆ:** ಕುಲಸಚಿವರು ವಿಷಯವನ್ನು ಮಂಡಿಸಿ ಮಾತನಾಡುತ್ತಾ, ಪ್ರೊ. ಎಸ್.ಎನ್. ಯೋಗೀಶ್, ಪ್ರಾಧ್ಯಾಪಕರು ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ ಇವರು ತಮ್ಮ ವಿಭಾಗದ ವಿದ್ಯಾರ್ಥಿನಿಯೊಂದಿಗೆ

ನಡೆಸಿದ ಸಂಭಾಷಣೆಯ ಕುರಿತು ಸರ್ಕಾರದಿಂದ ಬಂದ ಪತ್ರಗಳು ಹಾಗೂ ಇದನ್ನು ಪರಿಶೀಲಿಸಿ ವರದಿ ನೀಡಲು ರಚಿಸಲಾದ ಸಮಿತಿಯ ಮಾಹಿತಿಯನ್ನು ನೀಡಿದರು. ಸದರಿ ಸಮಿತಿಯು ಸಭೆ ಸೇರಿ ಪರಿಶೀಲಿಸಿ ವರದಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ ಸಲ್ಲಿಸಿದ್ದು, ಸದರಿ ಲಕೋಟೆಯನ್ನು ಸಿಂಡಿಕೇಟ್ ಸಮ್ಮುಖದಲ್ಲಿ ತೆರೆಯಲು ಅನುಮತಿ ಕೋರಿದರು.

ಸದರಿ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ಇವರು ಮಾತನಾಡುತ್ತಾ, ಸರ್ಕಾರದಿಂದ ಬಂದ ಪತ್ರ ಹಾಗೂ ದೂರನ್ನು ಆಧರಿಸಿ ಸಮಿತಿಯ ವ್ಯಾಪ್ತಿಯೊಳಗೆ ಕ್ರಮಕೈಗೊಂಡು ವರದಿಯನ್ನು ಸಿದ್ಧಪಡಿಸಿ ಸಲ್ಲಿಸಲಾಗಿದೆ ಎಂದರು.

ಸಮಿತಿಯು ಪರಾಮರ್ಶಿಸಿ ಕೈಗೊಂಡ ವಿವರಗಳನ್ನು ಸದಸ್ಯರುಗಳಾದ ಶ್ರೀ. ಧರ್ಮಪ್ರಸಾದ್ ಜಿ. ಹಾಗೂ ಪ್ರೊ. ವಿ. ಕೃಷ್ಣ ಇವರುಗಳು ಸಭೆಗೆ ನೀಡಿದರು.

ನಿರ್ಣಯ:ಸುದೀರ್ಘ ಚರ್ಚೆಯ ನಂತರ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ಇವರ ಅಧ್ಯಕ್ಷತೆಯ ಸಮಿತಿಯು ನೀಡಿರುವ ವರದಿಯನ್ನು ಪರಿಶೀಲಿಸಿ ಅನುಮೋದಿಸಿ ಮುಂದಿನ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**2021–ಸಿಂ–2.08**(ಸಿ):ವಿಲೀನೀಕರಣಗೊಂಡ ನೌಕರರಿಗೆ ಸೇವಾ ಸೌಲಭ್ಯಗಳನ್ನು ವಿಸ್ತರಿಸುವ ಕುರಿತು.

ಚರ್ಚೆ: ಕುಲಸಚಿವರು ಮಾತನಾಡುತ್ತಾ ಇದು ಈ ಹಿಂದಿನ ಸಭೆಯಲ್ಲಿ ಮಂಡಿಸಿದ ವಿಷಯವಾಗಿದ್ದು, ಇದರ ಬಗ್ಗೆ ಕೆಲವು ಸಿಬ್ಬಂದಿಗಳು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ಅರ್ಜಿಯು ವಜಾ ಆದ ಹಿನ್ನೆಲೆಯಲ್ಲಿ ಮೇಲ್ಮನವಿಯೂ ಸಹ ದಿನಾಂಕ:28–06–2021ರಂದು ವಜಾಗೊಂಡಿರುವ ಅಂಶವನ್ನು ಸಭೆಗೆ ವಿವರಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ., ರವರು ಮಾತನಾಡುತ್ತಾ ಜೇಷ್ಠತೆ ಪರಿಶೀಲಿಸಿದಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ. ಈ ಬಗ್ಗೆ ಪರಿಶೀಲಿಸಿಯೇ ವರದಿ ನೀಡಲಾಗಿದೆ ಎಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್., ಇವರು ಮಾತನಾಡುತ್ತಾ ಹಂಗಾಮಿ ನೌಕರರುಗಳಿಗೆ ಈ ಹಿಂದೆ ನೀಡಿದಂತೆ ಇವರಿಗೆ ಸೌಲಭ್ಯ ವಿಸ್ತರಿಸಬೇಕು ಎಂದರು. ಸದಸ್ಯರಾದ ಶ್ರೀ ಕರುಣಾಕರ್ ಬಿ. ರವರು ಮಾತನಾಡುತ್ತಾ ಪ್ರಕರಣ ನ್ಯಾಯಾಲಯಕ್ಕೆ ಸಂಬಂಧಿಸಿರುವುದರಿಂದ ಪರಿಶೀಲಿಸಬೇಕು ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ., ಇವರು ಮಾತನಾಡುತ್ತಾ 2006ಕ್ಕಿಂತ ಹಿಂದೆ ಖಾಯಂಗೊಂಡ ಸಿಬ್ಬಂದಿಗಳಿಗೆ ಸರ್ವೋಚ್ಚ ನ್ಯಾಯಾಲಯದ ಉಮಾದೇವಿ ಪ್ರಕರಣವು ಅನುಕೂಲವಾಗಿದೆ ಎಂದರು.

ಕುಲಸಚಿವರು ಮಾತನಾಡುತ್ತಾ ನ್ಯಾಯಾಲಯದ ತೀರ್ಪಿನಂತೆ ಇವರಿಗೆ ಸೇವಾ ಸೌಲಭ್ಯಗಳನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ನ್ಯಾಯಾಲಯದ ತೀರ್ಪನ್ನು ಕೂಲಂಕಷವಾಗಿ ಪರಿಶೀಲಿಸಿ ಮುಂದಿನ ಸಭೆಯಲ್ಲಿ ವಿವರವಾಗಿ ಚರ್ಚಿಸಲು ತೀರ್ಮಾನಿಸಲಾಯಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2021–ಸಿಂ–2.10(ಎ):** ದಿನಾಂಕ:19–03–2021 ರಂದು ನಡೆದ ಖರೀದಿ ಸಮಿತಿ ಸಭೆ ನಡಾವಳಿ ಅನುಮೋದನೆ ಬಗ್ಗೆ.

ಚರ್ಚೆ: ಕುಲಸಚಿವರು ಮಾತನಾಡುತ್ತಾ, ಸದರಿ ವಿಷಯವು ಈ ಹಿಂದಿನ ಸಭೆಯಲ್ಲಿ ಮಂಡಿಸಿ ಮುಂದೂಡಿದ ವಿಷಯವಾಗಿರುವುದನ್ನು ಸಭೆಯ ಗಮನಕ್ಕೆ ತಂದರು, ಸದಸ್ಯರಾದ ಶ್ರೀ. ಧರ್ಮಪ್ರಸಾದ್ ಜಿ., ಇವರು ಮಾತನಾಡುತ್ತಾ ಈ ಹಿಂದಿನ ಸಭೆಯಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿ ಕ್ರಮಕೈಗೊಳ್ಳಬೇಕೆಂದು ತೀರ್ಮಾನಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಖರೀದಿ ಸಮಿತಿಯ ಸದಸ್ಯರೂ ಆದ ಶ್ರೀ. ಹೆಚ್.ಬಿ. ರಮೇಶ್‌ಬಾಬುರವರು ಮಾತನಾಡುತ್ತಾ, ಖರೀದಿ ಸಮಿತಿಯ ಸಭೆಯಲ್ಲಿ ಕಛೇರಿಯ ದೈನಂದಿನ ಕಾರ್ಯಕ್ಕೆ ಅತ್ಯಗತ್ಯವಾಗಿರುವ ಪೀಠೋಪಕರಣಗಳು ಇತ್ಯಾದಿಗಳಿಗೆ ಮಾತ್ರ ಅನುಮೋದನೆ ನೀಡಿರುವ ಹಾಗೂ ಈ ಬಗ್ಗೆ ಪರಿಶೀಲಿಸಲಾಗಿದೆ ಎಂದರು.

ಮುಂದುವರೆದು ಮಾತನಾಡುತ್ತಾ, ಟೆಂಡರ್ ಪರಿಶೀಲನಾ ಸಮಿತಿಗೆ ಖರೀದಿ ಸಮಿತಿಯ ಸದಸ್ಯರನ್ನು ನೇಮಿಸಿದಲ್ಲಿ ಹೆಚ್ಚು ಉಪಯುಕ್ತವಾಗುವುದು ಎಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಪ್ರತಿಯೊಂದು ಟೆಂಡರ್ ಪರಿಶೀಲನಾ ಸಮಿತಿಗೂ ಸಹ ಒಬ್ಬೊಬ್ಬರು ಸಿಂಡಿಕೇಟ್ ಸದಸ್ಯರನ್ನು ನೇಮಿಸಲಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ದಿನಾಂಕ:19–03–2021 ರಂದು ನಡೆದ ಖರೀದಿ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

## ಶೈಕ್ಷಣಿಕ ವಿಭಾಗ

**2021–ಸಿಂ–2.23(ಎ):** ಸೆಂಟ್ರಲ್ ಕಾಫಿ ರೀಸರ್ಚ್ ಇನ್‌ಸ್ಟಿಟ್ಯೂಟ್, ಬಾಳೆಹೊನ್ನೂರು – ಈ ಸಂಸ್ಥೆಯ "ಅನ್ವಯಿಕ ಪ್ರಾಣಿಶಾಸ್ತ್ರ ಮತ್ತು ಅನ್ವಯಿಕ ಸಸ್ಯಶಾಸ್ತ್ರ" ವಿಭಾಗಗಳ ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಣ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಸೆಂಟ್ರಲ್ ಕಾಫಿ ರೀಸರ್ಚ್ ಇನ್‌ಸ್ಟಿಟ್ಯೂಟ್, ಬಾಳೆಹೊನ್ನೂರು ಈ ಸಂಸ್ಥೆಯ ಅನ್ವಯಿಕ ಪ್ರಾಣಿಶಾಸ್ತ್ರ ಮತ್ತು ಅನ್ವಯಿಕ ಸಸ್ಯಶಾಸ್ತ್ರ ವಿಭಾಗಗಳ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನವೀಕರಿಸುವ ಕುರಿತಂತೆ ರಚಿಸಲಾದ ಪರಿಣಿತರ ಸಮಿತಿಯು ಸದರಿ ಸಂಸ್ಥೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಲ್ಲಿಸಲಾದ ವರದಿಯನ್ನು ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿರುವುದಾಗಿ ವಿವರಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಸೆಂಟ್ರಲ್ ಕಾಫಿ ರೀಸರ್ಚ್ ಇನ್‌ಸ್ಟಿಟ್ಯೂಟ್, ಬಾಳೆಹೊನ್ನೂರು ಈ ಸಂಸ್ಥೆಯ "ಅನ್ವಯಿಕ ಪ್ರಾಣಿಶಾಸ್ತ್ರ ಮತ್ತು ಅನ್ವಯಿಕ ಸಸ್ಯಶಾಸ್ತ್ರ" ವಿಭಾಗಗಳ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ಪರಿಣಿತರ ಸಮಿತಿಯ ಶಿಫಾರಸ್ಸಿನಂತೆ 03 ವರ್ಷಗಳ ಅವಧಿಗೆ ನವೀಕರಿಸಲು ನಿರ್ಣಯಿಸಲಾಯಿತು.

ದಿನಾಂಕ:14-07-2021 ರ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯಗಳು.

## ಪ್ರಾಧಿಕಾರಗಳ ವಿಭಾಗ

**2021-ಸಿಂ-3.01:** ದಿನಾಂಕ:24-03-2021 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಡೀಕರಣ.

ನಿರ್ಣಯ: ಮುಂದೂಡಲಾಯಿತು

**2021-ಸಿಂ-3.02:** ಸ್ನಾತಕ ಮತ್ತು ಸ್ನಾತಕೋತ್ತರ (ಸಂಯುಕ್ತ) ಹಿಂದಿ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಮುಂದೂಡಲಾಯಿತು

**2021-ಸಿಂ-3.03:** "STATUTES GOVERNING THE UP-GRADATION AND REORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY" ಪರಿನಿಯಮದ ಅನುಮೋದನೆ ಕುರಿತು.

ನಿರ್ಣಯ: ಮುಂದೂಡಲಾಯಿತು

**2021-ಸಿಂ-3.03(ಎ):** ಸ್ನಾತಕೋತ್ತರ ಮನಃಶಾಸ್ತ್ರ ಪಿ.ಜಿ. ಡಿಪ್ಲೋಮಾ ಇನ್ ಕೌನ್ಸಿಲಿಂಗ್ (ಸಂಯುಕ್ತ) ಅಧ್ಯಯನ ಮಂಡಳಿಯನ್ನು ರಚಿಸಿರುವುದನ್ನು ಸ್ಥಿರೀಕರಿಸುವ ಬಗ್ಗೆ.

ನಿರ್ಣಯ: ಮುಂದೂಡಲಾಯಿತು

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2021-ಸಿಂ-3.04:** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ಲಾಕ್‌ಡೌನ್ ಸಮಯದಲ್ಲಿ ಕಾರ್ಯ ನಿರ್ವಹಿಸಿರುವುದಕ್ಕಾಗಿ ಪ್ರೋತ್ಸಾಹ ಧನ ಮಂಜೂರು ಮಾಡುವ ಕುರಿತು.

ನಿರ್ಣಯ: ಮುಂದೂಡಲಾಯಿತು

**2021-ಸಿಂ-3.05:** ಹೆಸರು ಬದಲಾವಣೆಗೆ ಅನುಮತಿ ನೀಡುವ ಬಗ್ಗೆ.

ನಿರ್ಣಯ: ಮುಂದೂಡಲಾಯಿತು

**2021-ಸಿಂ-3.06:** ಸರ್ಕಾರದಿಂದ ಅನುಮತಿಸಲ್ಪಟ್ಟಿರುವ ಬೋಧಕ/ಬೋಧಕೇತರ ಹುದ್ದೆಗಳನ್ನು ಮರುಹಂಚಿಕೆ (Redeployment) ಮಾಡಿಕೊಳ್ಳುವ ಕುರಿತು.

ನಿರ್ಣಯ: ಮುಂದೂಡಲಾಯಿತು

**2021-ಸಿಂ-3.06(ಎ):** ಶ್ರೀಮತಿ ಅರ್ಚನಾಕುಮಾರಿ-ಇವರ ವೈದ್ಯಕೀಯ ಚಿಕಿತ್ಸಾ ವೆಚ್ಚ ಪಾವತಿಸುವ ಕುರಿತು.

ನಿರ್ಣಯ: ಶ್ರೀಮತಿ ಅರ್ಚನಾಕುಮಾರಿ, ಸಹಾಯಕ ಕುಲಸಚಿವರು (ಸ್ವಪ್ರ) ಶೈಕ್ಷಣಿಕ ವಿಭಾಗ ಇವರು ಸರ್ಕಾರದಿಂದ ಅನುಮೋದನೆ ಹೊಂದಿರುವ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಾಬ್ತು, ಅರ್ಹತಾ ಮೊತ್ತ ರೂ.4,28,821-00 (ನಾಲ್ಕು ಲಕ್ಷದ ಇಪ್ಪತ್ತೆಂಟು ಸಾವಿರದ ಎಂಟುನೂರ ಇಪ್ಪತ್ತೊಂದು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲು ಸಭೆಯು ಅನುಮತಿಸಿತು.

**2021–ಸಿಂ–3.06(ಬಿ):**ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ: ಮುಂದೂಡಲಾಯಿತು

**2021–ಸಿಂ–3.06(ಸಿ):** ಶ್ರೀ ಸೀತಾರಾಮ ಎಂ. – ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ವಜಾಗೊಳಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸುತ್ತಿರುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಶ್ರೀ. ಎಂ. ಸೀತಾರಾಮ್ ಇವರು ವಿಶ್ವವಿದ್ಯಾಲಯದಲ್ಲಿ ನೇಮಕಗೊಳ್ಳುವ ಸಮಯದಲ್ಲಿ ನೀಡಿದ ಜಾತಿ ಪ್ರಮಾಣ ಪತ್ರವನ್ನು ಉಡುಪಿ ಜಿಲ್ಲಾಧಿಕಾರಿಗಳು ರದ್ದುಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿಯವರನ್ನು ದಿನಾಂಕ:15–04–2021 ರಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾಲಯದ ಸೇವೆಯಿಂದ ವಜಾ ಮಾಡಲಾಗಿದೆ. ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ವಜಾ ಮಾಡಿದ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ., ಇವರು ಮಾತನಾಡುತ್ತಾ ಇವರಿಗೆ ನೋಟೀಸ್ ನೀಡಿ ಒಂದು ಅವಕಾಶವನ್ನು ನೀಡಬೇಕಾಗಿತ್ತಲ್ಲವೇ ಎಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಸರ್ಕಾರದ ಸುತ್ತೋಲೆಯನ್ವಯ ಇಂತಹ ಪ್ರಕರಣಗಳಲ್ಲಿ ಯಾವುದೇ ಮುನ್ಸೂಚನೆಯಿಲ್ಲದೇ ತಕ್ಷಣವೇ ಸೇವೆಯಿಂದ ವಜಾಗೊಳಿಸಬೇಕಾಗಿರುತ್ತದೆ ಎಂದು ಸಭೆಗೆ ವಿವರಿಸಿ ಈ ಸಂಬಂಧದ ಸರ್ಕಾರದ ಸುತ್ತೋಲೆಯನ್ನು ಸಭೆಗೆ ಓದಿ ವಿವರಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಶ್ರೀ. ಎಂ. ಸೀತಾರಾಮ್ ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ವಜಾಗೊಳಿಸಿದ ಕ್ರಮವನ್ನು ಸಭೆಯು ನಿಯಮಾನುಸಾರ ಸ್ಥಿರೀಕರಿಸಿತು.

**2021–ಸಿಂ–3.06(ಡಿ):**ಕುವೆಂಪು ವಿಶ್ವವಿದ್ಯಾಲಯದ ನಕಲಿ ಉತ್ತರಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿತರಿಗೆ ಕುವೆಂಪು ವಿಶ್ವವಿದ್ಯಾಲಯದ ಸಕ್ಷಮ ನೇಮಕಾತಿ ಪ್ರಾಧಿಕಾರದ ವತಿಯಿಂದ ಅಭಿಯೋಜನಾ ಮಂಜೂರಾತಿ ಪತ್ರ ನೀಡುವ ಕುರಿತು.

ಚರ್ಚೆ: ಕುಲಸಚಿವರು ವಿಷಯವನ್ನು ಪ್ರಸ್ತಾಪಿಸಿ ಮಂಡಿಸುತ್ತಾ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಈ ಹಿಂದೆ ನಡೆದ ಉತ್ತರಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾಖಲಾಗಿರುವ ದೂರಿಗೆ ಸಕ್ಷಮ ನೇಮಕಾತಿ ಪ್ರಾಧಿಕಾರದಿಂದ ಅಭಿಯೋಜನೆಗೆ ಒಳಪಡಿಸಲು ಅಭಿಯೋಜನಾ ಮಂಜೂರಾತಿ ಪತ್ರವನ್ನು ನೀಡುವಂತೆ ಪೊಲೀಸ್ ಇಲಾಖೆಯಿಂದ ಪತ್ರ ಬರೆದಿರುವುದರಿಂದ ಇದರ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶಬಾಬು ಇವರು ಮಾತನಾಡುತ್ತಾ ಇದು 2012ರ ಪ್ರಕರಣವಾಗಿದ್ದು ಯಾರೂ ದೂರು ನೀಡಿರುವುದಿಲ್ಲ ಸ್ವಯಂಪ್ರೇರಿತವಾಗಿ ದೂರು ದಾಖಲಾಗಿದೆ ಅಲ್ಲದೇ ಈಗಾಗಲೇ ಈ ನೌಕರರುಗಳ ಇಲಾಖಾ ವಿಚಾರಣೆಯನ್ನು ನಡೆಸಿ ದಂಡನೆಯನ್ನು ಸಹ ನೀಡಲಾಗಿದೆ ಎಂದು ತಿಳಿಸಿ ಈ ಹಂತದಲ್ಲಿ ಅಭಿಯೋಜನಾ ಮಂಜೂರಾತಿ ನೀಡುವುದು ಬೇಡವೆಂದರು. ಇದಕ್ಕೆ ಇತರೆ ಸದಸ್ಯರುಗಳು ಸಹಮತ ವ್ಯಕ್ತಪಡಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಈ ಪ್ರಕರಣವು ಘಟಿಸಿ 9 ವರ್ಷಗಳಾಗಿದ್ದು, ಈಗಾಗಲೇ ವಿಶ್ವವಿದ್ಯಾಲಯವು ಇಲಾಖಾ ವಿಚಾರಣೆ ನಡೆಸಿ ದಂಡನೆಯನ್ನು ವಿಧಿಸಿರುತ್ತದೆ. ಅಲ್ಲದೇ ಉಚ್ಚ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಭದ್ರಾವತಿ ನ್ಯಾಯಾಲಯವು ಈ ಪ್ರಕರಣದಲ್ಲಿ 06 ಜನ ನೌಕರರ ವಿಚಾರಣೆಯನ್ನು ಕೈ ಬಿಟ್ಟಿರುತ್ತದೆ. ಆದ್ದರಿಂದ ಸಿಂಡಿಕೇಟ್ ಸಭೆಯ ಅಭಿಯೋಜನಾ ಮಂಜೂರಾತಿ ಪತ್ರ ನೀಡದಿರಲು ಸಭೆಯು ನಿರ್ಣಯಿಸಿತು.

**2021–ಸಿಂ–3.06(ಇ):** ಶ್ರೀ ಎಸ್. ರಾಮಕೃಷ್ಣ – ಇವರ ತಾಯಿಯ ವೈದ್ಯಕೀಯ ಚಿಕಿತ್ಸಾ ವೆಚ್ಚ ಪಾವತಿಸುವ ಕುರಿತು.

ನಿರ್ಣಯ: ಶ್ರೀ. ಎಸ್. ರಾಮಕೃಷ್ಣ, ಹಣಕಾಸು ಅಧಿಕಾರಿಗಳು – ಇವರ ಮತ್ತು ಇವರ ಕುಟುಂಬದವರು ಸರ್ಕಾರದಿಂದ ಅನುಮೋದನೆ ಹೊಂದಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಾಬ್ತು, ಒಟ್ಟು ಅರ್ಹತಾ ಮೊತ್ತ **ರೂ.4,63,225–00** (ನಾಲ್ಕು ಲಕ್ಷದ ಅರವತ್ತ ಮೂರು ಸಾವಿರದ ಎರಡು ನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲು ಸಭೆಯು ಅನುಮತಿಸಿತು.

**2021–ಸಿಂ–3.06(ಎಫ್):** ಶ್ರೀ ಬೇಳಕೇರಪ್ಪ ಬಿ. – ಇವರ ವೈದ್ಯಕೀಯ ಚಿಕಿತ್ಸಾ ವೆಚ್ಚ ಪಾವತಿಸುವ ಕುರಿತು.

ನಿರ್ಣಯ: ಶ್ರೀ ಬೇಳಕೇರಪ್ಪ ಬಿ. ಹಿರಿಯ ಸಹಾಯಕರು, ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ ಇವರ ಕುಟುಂಬದವರು ಸರ್ಕಾರದಿಂದ ಅನುಮೋದನೆ ಹೊಂದಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಾಬ್ತು, ಒಟ್ಟು ಅರ್ಹತಾ ಮೊತ್ತ **ರೂ.3,45,820–00** (ಮೂರು ಲಕ್ಷದ ನಲವತ್ತೈದು ಸಾವಿರದ ಎಂಟು ನೂರ ಇಪ್ಪತ್ತು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲು ಸಭೆಯು ಅನುಮತಿಸಿತು.

**2021–ಸಿಂ–3.06ಜಿ):**ಶ್ರೀ ರಮೇಶ್, ಕಿರಿಯ ಸಹಾಯಕರು–ಇವರನ್ನು ಸೇವೆಯಲ್ಲಿ ಮುಂದುವರೆಸಿರುವ ಕುರಿತು.

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.06(ಹೆಚ್):** ವೃತ್ತಿ ಪದೋನ್ನತಿ (CAS) ಸಂಬಂಧ BOA / Screening cum Evaluation Committee ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

ಚರ್ಚೆ: ಕುಲಸಚಿವರು ದಿನಾಂಕ:05-07-2021, 06-07-2021, 08-07-2021 ಹಾಗೂ ದಿನಾಂಕ:09-07-2021 ರಂದು ವಿಶ್ವವಿದ್ಯಾಲಯದ ಘಟಕ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಾಪಕರುಗಳ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ನಡೆದ ಸಭೆಗಳ ನಡಾವಳಿಗಳನ್ನು ಸಭೆಗೆ ಮಂಡಿಸಲು ಅನುಮತಿ ಕೋರಿ, ನಂತರ ನಡಾವಳಿಗಳನ್ನು ಸಭೆಗೆ ಮಂಡಿಸಿದರು. ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡುತ್ತಾ ಈ ಅಧ್ಯಾಪಕರುಗಳ ಅರ್ಹತಾ ದಿನಾಂಕಗಳ ಬಗ್ಗೆ ಅನುಸರಿಸಲಾದ ಮಾನದಂಡಗಳ ಮಾಹಿತಿ ಕೋರಿದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಯುಜಿಸಿ ಮಾರ್ಗಸೂಚಿ ಅನ್ವಯ ಹಾಗೂ ವಿಶ್ವವಿದ್ಯಾಲಯದ ಪರಿನಿಯಮದನ್ವಯ ಕ್ರಮ ಕೈಗೊಳ್ಳಲಾಗಿದೆ ಎಂದರು. ಸದಸ್ಯರಾದ ಶ್ರೀ ಹೆಚ್. ಬಿ. ರಮೇಶಬಾಬು ರವರು ಮಾತನಾಡುತ್ತಾ ಐಕ್ಯೂಎಸಿ ಆದ ಮೇಲೆ ಪುನ: ಅದನ್ನು ಬದಲಾಯಿಸಲು ಅವಕಾಶವಿದೆಯೇ ಎಂದು ಪ್ರಶ್ನಿಸಿದರು.

ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡುತ್ತಾ ಐಕ್ಯೂಎಸಿ ಯಿಂದ ಅಂಕಗಳನ್ನು ನೀಡುವ ಪದ್ಧತಿಯನ್ನು ಬದಲಾಯಿಸಿ ಯುಜಿಸಿ ನಿಯಮಾನುಸಾರ ಬೇರೆ ವಿಶ್ವವಿದ್ಯಾಲಯಗಳ ವಿಷಯ ಪರಿಣಿತರನ್ನು ಕರೆಸಿ ಅರ್ಜಿಯನ್ನು ಪರಿಶೀಲಿಸಿ ಅಂಕ ನೀಡುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ರಮೇಶ್‌ಬಾಬು ಹೆಚ್.ಬಿ.,ರವರು ಮಾತನಾಡುತ್ತಾ ಪ್ರಸ್ತುತ ಆಗಿರುವ ವೃತ್ತಿ ಪದೋನ್ನತಿಯನ್ನು ಜಾರಿ ಮಾಡಿ ನಂತರ ಪದ್ಧತಿಯನ್ನು ಬದಲಾಯಿಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ., ಇವರು ಮಾತನಾಡುತ್ತಾ ಸಾಫ್ಟ್‌ವೇರ್ ಅನಾಲಿಸಿಸ್ ಅಭಿವೃದ್ಧಿಗೊಳಿಸಿ ಪರಿಶೀಲಿಸುವುದು ಸೂಕ್ತವೆಂದರು. ಕುಲಸಚಿವರು(ಪರೀಕ್ಷಾಂಗ) ಇವರು ಮಾತನಾಡುತ್ತಾ ಐಕ್ಯೂಎಸಿ ನಲ್ಲಿ ಅರ್ಹತೆ ಹೊಂದಿದಲ್ಲಿ ಅದನ್ನು ಬಿ.ಒ.ಎ ನಲ್ಲಿ ತಿರಸ್ಕರಿಸಬಾರದು ಎಂದರು. ಸದಸ್ಯರಾದ ಪ್ರೊ. ವಿ. ಕೃಷ್ಣ ಇವರು ಮಾತನಾಡುತ್ತಾ ಐಕ್ಯೂಎಸಿಯು ಆಂತರಿಕ ಸದಸ್ಯರುಗಳಿಂದ ಅಂಕಗಳನ್ನು ನೀಡುವುದರಿಂದ ತಾರತಮ್ಯಕ್ಕೆ ಅವಕಾಶ ನೀಡಿದಂತಾಗುತ್ತದೆ ಎಂದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಮುಂದಿನ ದಿನಗಳಲ್ಲಿ ಬಾಹ್ಯ ವಿಷಯ ಪರಿಣಿತರನ್ನು ಕರೆಸಲಾಗುವುದು ಎಂದರು. ಮಾನ್ಯ ಕುಲಪತಿಗಳು ಮಾತನಾಡುತ್ತಾ ಸಿ.ಎ.ಎಸ್. ನಲ್ಲಿ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಬೇರೆ ಬೇರೆ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡುತ್ತಾ ಸಿ.ಎ.ಎಸ್. ಮಾಡುವಾಗ ಸಂದರ್ಶನ ಮಾಡಿದ ನಂತರ ಅನರ್ಹತೆ ಎಂದು ತೀರ್ಮಾನಿಸುವುದು ಸೂಕ್ತವಲ್ಲವೆಂದರು.

ನಿರ್ಣಯ:1) ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ / ಘಟಕ ಮತ್ತು ನೇರ ಆಡಳಿತ ಕಾಲೇಜುಗಳ ಅಧ್ಯಾಪಕರುಗಳಿಗೆ ಎಜಿಪಿ ಹಾಗೂ ವೃತ್ತಿ ಪದೋನ್ನತಿಗೆ ಸಂಬಂಧಿಸಿದ ನೇಮಕಾತಿ ಮಂಡಳಿಯ ಸಭೆಗಳನ್ನು ಯುಜಿಸಿ ಮಾರ್ಗಸೂಚಿಗಳನ್ವಯ ದಿನಾಂಕ:05-07-2021, 06-07-2021, 08-07-2021 ಹಾಗೂ 09-07-2021 ರಂದು ಏರ್ಪಡಿಸಲಾಗಿದ್ದು, ವಿವಿಧ ವಿಷಯಗಳ ಬಿಓಎ ಸಭೆಗಳ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಈ ಕೆಳಗಿನಂತೆ ಅನುಮೋದಿಸಿತು.

2) ಅಧ್ಯಾಪಕರ ವೃತ್ತಿ ಪದೋನ್ನತಿ ಅರ್ಜಿಗಳನ್ನು ಐ.ಕ್ಯೂ.ಎ.ಸಿ.ಯು ಪರಿಶೀಲಿಸುವ ಸಂದರ್ಭದಲ್ಲಿ ಅನ್ಯ ವಿಶ್ವವಿದ್ಯಾಲಯದ ವಿಷಯ ಪರಿಣಿತರನ್ನು ಆಹ್ವಾನಿಸಿ ಪರಿಶೀಲಿಸಲು ತೀರ್ಮಾನಿಸಲಾಯಿತು.

| ಕ್ರ. ಸಂ | ಅಧ್ಯಾಪಕ ಹೆಸರು ಪ್ರೊ./ಡಾ./ಶ್ರೀ/ಶ್ರೀಮತಿ | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಅರ್ಹತಾ ದಿನಾಂಕ | ಶಿಫಾರಸ್ಸು ಮಾಡಿದ ದಿನಾಂಕ |
|---|---|---|---|---|---|---|
| 01 | ಶಫೀವುಲ್ಲಾ | ಇತಿಹಾಸ | ಉಪನ್ಯಾಸಕರು | ಹಿರಿಯ ಶ್ರೇಣಿ ಉಪನ್ಯಾಸಕರು | 07-01-2009 | 07-01-2009 |
| 02 | ಮಹೇಶ್ವರಪ್ಪ | ಇತಿಹಾಸ | Academic Level 11 (ಎ.ಜಿ.ಪಿ - 7000) | Academic Level 12(ಎ.ಜಿ.ಪಿ - 8000) | 14-07-2019 | 14-07-2019 |
| 03 | ಚಂದ್ರಶೇಖರಪ್ಪ.ಟಿ.ಜಿ | ಇತಿಹಾಸ | Academic Level 10 (ಎ.ಜಿ.ಪಿ - 6000) | Academic Level 11(ಎ.ಜಿ.ಪಿ - 7000) | 25-05-2021 | 25-05-2021 |
| 04 | ಚಂದ್ರಶೇಖರಪ್ಪ.ಬಿ.ಎಂ. | ಇತಿಹಾಸ | Academic Level 11 (ಎ.ಜಿ.ಪಿ - 7000) | Academic Level 12(ಎ.ಜಿ.ಪಿ - 8000) | 30-01-2020 | 30-01-2020 |
| 06 | ಮಂಜುನಾಥ.ಕೆ.ಎನ್ | ಇತಿಹಾಸ | Academic Level 12 (ಎ.ಜಿ.ಪಿ - 8000) | Academic Level 13A (ಎ.ಜಿ.ಪಿ - 9000) | 14-10-2020 | 14-10-2020 |
| 07 | ಶಂಭುಲಿಂಗಮೂರ್ತಿ.ಹೆಚ್ | ಇತಿಹಾಸ | Academic Level 12 (ಎ.ಜಿ.ಪಿ - 8000) | Academic Level 13A (ಎ.ಜಿ.ಪಿ - 9000) | 16-02-2020 | 16-02-2020 |
| 07 | ಶಿವಾನಂದಸ್ವಾಮಿ. ಕೆ.ಆರ್. | ಇಂಗ್ಲೀಷ್ | | | Not Eligible | |

| | | | | | | |
|---|---|---|---|---|---|---|
| 08 | ಮೇಟಿ ಮಲ್ಲಿಕಾರ್ಜುನ | ಇಂಗ್ಲೀಷ್ | Academic Level 13A (ಎ.ಜಿ.ಪಿ 9000) | Academic Level 14(ಎ.ಜಿ.ಪಿ-10000) | 19-03-2021 | 19-03-2021 |
| 09 | ಅವಿನಾಶ್ ಟಿ. | ಇಂಗ್ಲೀಷ್ | Academic Level 13A (ಎ.ಜಿ.ಪಿ-9000) | Academic Level 14(ಎ.ಜಿ.ಪಿ-10000) | 19-03-2021 | 19-03-2021 |
| 10 | ವೀಣಾ ಎಂ.ಕೆ. | ಇಂಗ್ಲೀಷ್ | Academic Level 13A (ಎ.ಜಿ.ಪಿ- 9000) | Academic Level 14(ಎ.ಜಿ.ಪಿ- 10000) | 19-03-2021 | 19-03-2021 |
| 11 | ಚನ್ನಪ್ಪ ಸಿ. | ಇಂಗ್ಲೀಷ್ | Academic Level 13A (ಎ.ಜಿ.ಪಿ-9000) | Academic Level 14(ಎ.ಜಿ.ಪಿ- 10000) | 19-03-2021 | 19-03-2021 |
| 12 | ಉದ್ದಗಟ್ಟಿ ವೆಂಕಟೇಶ್ | ರಾಜ್ಯಶಾಸ್ತ್ರ | Academic Level 13A (ಎ.ಜಿ.ಪಿ- 9000) | Academic Level 14(ಎ.ಜಿ.ಪಿ- 10000) | 09-02-2021 | 09-02-2021 |
| 13 | ಚಂದ್ರಪ್ಪ ಕೆ. | ರಾಜ್ಯಶಾಸ್ತ್ರ | Academic Level 11 (ಎ.ಜಿ.ಪಿ 7000) | Academic Level 12(ಎ.ಜಿ.ಪಿ 8000) | 29-10-2019 | 29-10-2019 |
| 14 | ರಂಗರಾಜು ಕೆ. | ರಾಜ್ಯಶಾಸ್ತ್ರ | Lecturer | Senior Scale | 09-03-2009 | 09-03-2009 |
| 15 | ಪ್ರಹ್ಲಾದಪ್ಪ ಎಂ. ಹೆಚ್. | ರಾಜ್ಯಶಾಸ್ತ್ರ | Academic Level 13A (ಎ.ಜಿ.ಪಿ- 9000) | Academic Level 14 (ಎ.ಜಿ.ಪಿ- 10000) | 19-03-2021 | 19-03-2021 |
| 16 | ಪ್ರಸನ್ನಕುಮಾರ್ ಕೆ. | ರಾಜ್ಯಶಾಸ್ತ್ರ | Academic Level 12 (ಎ.ಜಿ.ಪಿ – 8000) | Academic Level 13A (ಎ.ಜಿ.ಪಿ – 9000) | 18-07-2018 | 18-07-2018 |
| 17 | ಸತ್ಯನಾರಾಯಣ ಬಿ.ಹೆಚ್ | ರಾಜ್ಯಶಾಸ್ತ್ರ | Academic Level 12 (ಎ.ಜಿ.ಪಿ – 8000) | Academic Level 13A (ಎ.ಜಿ.ಪಿ – 9000) | 14-02-2020 | 14-02-2020 |
| 18 | ಧರ್ಮೇಗೌಡ ಹೆಚ್.ಎಂ. | ರಾಜ್ಯಶಾಸ್ತ್ರ | Academic Level 13A (ಎ.ಜಿ.ಪಿ- 9000) | Academic Level 14(ಎ.ಜಿ.ಪಿ.- 10000) | 19-03-2021 | 19-03-2021 |
| 19 | ಗೋಪಾಲ್ ಟಿ.ಡಿ. | ಸಸ್ಯಶಾಸ್ತ್ರ | Academic Level 10 (ಎ.ಜಿ.ಪಿ-6000) | Academic Level 11 (ಎ.ಜಿ.ಪಿ- 7000) | 28-11-2016 | 28-11-2016 |
| 20 | ನಫೀಸಾ ಬೇಗಂ | ಸಸ್ಯಶಾಸ್ತ್ರ | Academic Level 12 (ಎ.ಜಿ.ಪಿ-8000) | Academic Level 13A (ಎ.ಜಿ.ಪಿ-9000) | 21-06-2020 | 21-06-2020 |
| 21 | ಪರಮೇಶ್ವರ ನಾಯ್ಕ್ ಟಿ. | ಸಸ್ಯಶಾಸ್ತ್ರ | Academic Level 13A (ಎ.ಜಿ.ಪಿ- 9000) | Academic Level 14(ಎ.ಜಿ.ಪಿ- 10000) | 19-03-2021 | 19-03-2021 |
| 22 | ರಾಜೇಶ್ವರಿ ಎನ್. | ಸಸ್ಯಶಾಸ್ತ್ರ | Academic Level 13A (ಎ.ಜಿ.ಪಿ – 9000) | Academic Level 14(ಎ.ಜಿ.ಪಿ-10000) | 19-03-2021 | 19-03-2021 |
| 23 | ರಮೇಶ್‌ಬಾಬು ಹೆಚ್.ಎನ್. | ಸಸ್ಯಶಾಸ್ತ್ರ | Academic Level 13A (ಎ.ಜಿ.ಪಿ – 9000) | Academic Level 14(ಎ.ಜಿ.ಪಿ-10000) | 19-03-2021 | 19-03-2021 |
| 24 | ಆಶಾಶ್ರೀ ಹೆಚ್. ಎಂ. | ಪ್ರಾಣಿಶಾಸ್ತ್ರ | Academic Level 11 (ಎ.ಜಿ.ಪಿ – 7000) | Academic Level 12 (ಎ.ಜಿ.ಪಿ – 8000) | 24-01-2019 | 24-01-2019 |
| 25 | ನಾಗರಾಜ್ ಪರಿಸರ | ಪರಿಸರ ವಿಜ್ಞಾನ | Academic Level 11 (ಎ.ಜಿ.ಪಿ – 7000) | Academic Level 12 (ಎ.ಜಿ.ಪಿ – 8000) | 16-07-2014 –AGP 7000 16-07-2019– AGP-8000 | As per UGC Notification No:2-16/2002(PS)pt.fi.11 |

| | | | | | | |
|---|---|---|---|---|---|---|
| 26 | ಗಿರಿಧರ ಕೆ. ವಿ. | ವಾಣಿಜ್ಯ ಶಾಸ್ತ್ರ | Academic Level 11 (ಎ.ಜಿ.ಪಿ-7000) | Academic Level 12 (ಎ.ಜಿ.ಪಿ-8000) | 22-12-2014 – AGP 7000 22-12-2019 AGP-8000 | 22-12-2019 |
| 27 | ವೀರಶೆಟ್ಟಿ ಜಿ. ರಾಥೋಡ್ | ವಾಣಿಜ್ಯ ಶಾಸ್ತ್ರ | Academic Level 11 (ಎ.ಜಿ.ಪಿ-7000) | Academic Level 12 (ಎ.ಜಿ.ಪಿ - 8000) | 22-12-2014 – AGP 7000 22-12-2019 AGP-8000 | 22-12-2019 |
| 28 | ಮಮತಾ ಎಸ್. ಎಂ. | ವಾಣಿಜ್ಯ ಶಾಸ್ತ್ರ | Academic Level 12 (ಎ.ಜಿ.ಪಿ-8000) | Academic Level 13A (ಎ.ಜಿ.ಪಿ - 9000) | 16-09-2020 | 16-09-2020 |
| 29 | ಶೋಭಾರಾಣಿ | ವಾಣಿಜ್ಯ ಶಾಸ್ತ್ರ | Academic Level 12 (ಎ.ಜಿ.ಪಿ- 8000) | Academic Level 13A (ಎ.ಜಿ.ಪಿ - 9000) | 16-09-2020 | 16-09-2020 |
| 30 | ಸರಳಾ ಕೆ. ಎಸ್ | ವಾಣಿಜ್ಯ ಶಾಸ್ತ್ರ | Academic Level 13A (ಎ.ಜಿ.ಪಿ-9000) | Academic Level 14(ಎ.ಜಿ.ಪಿ-10000) | 19-03-2021 | 19-03-2021 |
| 31 | ಕುಂದನ್ ಬಸವರಾಜ್ | ವಾಣಿಜ್ಯ ಶಾಸ್ತ್ರ | Academic Level 13A (ಎ.ಜಿ.ಪಿ-9000) | Academic Level (ಎ.ಜಿ.ಪಿ - 10000) | 19-03-2021 | 19-03-2021 |
| 32 | ಬಾಲಸ್ವಾಮಿ | ವಾಣಿಜ್ಯ ಶಾಸ್ತ್ರ | Not Eligible | | | |
| 33 | ಪ್ರಭಾಕರ ಬಿ.ಟಿ. | ಜೈವಿಕ ತಂತ್ರಜ್ಞಾನ | Academic Level 11 (ಎ.ಜಿ.ಪಿ-7000) | Academic Level 12 (ಎ.ಜಿ.ಪಿ - 8000) | 15-07-2013 – AGP 7000 15-07-2018 AGP-8000 | 15-07-2018 |
| 35 | ರಮೇಶ್ ಸಿ.ಕೆ. | ಜೈವಿಕ ತಂತ್ರಜ್ಞಾನ | Academic Level 13A (ಎ.ಜಿ.ಪಿ 9000) | Academic Level 14(ಎ.ಜಿ.ಪಿ - 10000) | 19-03-2021 | 19-03-2021 |
| 36 | ಮಂಜುನಾಥ ಹೆಚ್. ಪಿ. | ಶಿಕ್ಷಣ | Academic Level 11 (ಎ.ಜಿ.ಪಿ- 7000) | Academic Level 12 (ಎ.ಜಿ.ಪಿ- 8000) | 05-02-2020 | 05-02-2020 |
| 37 | ಡೈಸಿ ಜಾಸ್ಮಿನ್ | ಕನ್ನಡ | ಉಪನ್ಯಾಸಕರು | ಹಿರಿಯ ಶ್ರೇಣಿ ಉಪನ್ಯಾಸಕರು | 23-04-2009 | 23-04-2009 |
| 38 | ಪ್ರಕಾಶ್ ಬಿ.ಎನ್. | ಕನ್ನಡ | Academic Level 11 (ಎ.ಜಿ.ಪಿ- 7000) | Academic Level 12 (ಎ.ಜಿ.ಪಿ - 8000) | 30-01-2020 | 30-01-2020 |
| 39 | ಮೋಹನ್ ಹೆಚ್. ಎಸ್. | ಕನ್ನಡ | Academic Level 11 (ಎ.ಜಿ.ಪಿ-7000) | Academic Level 12 (ಎ.ಜಿ.ಪಿ - 8000) | 22-01-2014- AGP 7000 23-06-2019 AGP-8000 | 23-06-2019 |
| 40 | ಹಾಲಮ್ಮ ಎಂ. | ಕನ್ನಡ | Academic Level 11 (ಎ.ಜಿ.ಪಿ-7000) | Academic Level 12 (ಎ.ಜಿ.ಪಿ - 8000) | 30-01-2020 | 30-01-2020 |
| 41 | ಶುಭಾ ಮರವಂತೆ | ಕನ್ನಡ | Academic Level 11 (ಎ.ಜಿ.ಪಿ- 7000) | Academic Level 12 (ಎ.ಜಿ.ಪಿ - 8000) | 22-01-2014- AGP 7000 30-01-2020 AGP-8000 | 30-01-2020 |
| 42 | ಮಹಾದೇವಸ್ವಾಮಿ ಕೆ. ಎನ್ | ಪತ್ರಿಕೋದ್ಯಮ | Academic Level 12 (ಎ.ಜಿ.ಪಿ- 8000) | Academic Level 13A (ಎ.ಜಿ.ಪಿ - 9000) | Not eligible as per UGC 2018 Guidelines | |

| | | | | | | |
|---|---|---|---|---|---|---|
| 43 | ಧನಂಜಯ ಕೆ.ಬಿ. | ಅರ್ಥಶಾಸ್ತ್ರ | Academic Level 13A (ಎ.ಜಿ.ಪಿ– 9000) | Academic Level 14 (ಎ.ಜಿ.ಪಿ– 10000) | 19-03-2021 | 19-03-2021 |
| 44 | ಪೂರ್ವಾಚಾರ್ ಎಂ. | ಸಮಾಜಶಾಸ್ತ್ರ | Academic Level 13A (ಎ.ಜಿ.ಪಿ– 9000) | Academic Level 14 (ಎ.ಜಿ.ಪಿ– 10000) | 19-03-2021 | 19-03-2021 |
| 45 | ಕೃಪಾಲಿನಿ ಎಸ್. | ಸಮಾಜಶಾಸ್ತ್ರ | Academic Level 12 (ಎ.ಜಿ.ಪಿ–8000) | Academic Level 13A (ಎ.ಜಿ.ಪಿ – 9000) | 16-07-2018 | 16-07-2018 |
| 46 | ಅರುಣ್‌ಕುಮಾರ್ ಎನ್.ಸಿ | ರಸಾಯನಶಾಸ್ತ್ರ | Academic Level 10 (ಎ.ಜಿ.ಪಿ– 6000) | Academic Level 11 (ಎ.ಜಿ.ಪಿ - 7000) | 20-10-2016 | 20-10-2016 |
| 47 | ಪರಮೇಶ್ವರನಾಯಕ್ ಪಿ. | ರಸಾಯನಶಾಸ್ತ್ರ | Academic Level 12 (ಎ.ಜಿ.ಪಿ– 8000) | Academic Level 13A (ಎ.ಜಿ.ಪಿ - 9000) | 06-01-2020 | 06-01-2020 |
| 48 | ಲತಾ ಕೆ. ಪಿ. | ರಸಾಯನಶಾಸ್ತ್ರ | Academic Level 13A (ಎ.ಜಿ.ಪಿ– 9000) | Academic Level 14(ಎ.ಜಿ.ಪಿ – 10000) | 19-03-2021 | 19-03-2021 |
| 49 | ವಾಗ್ದೇವಿ ಹೆಚ್.ಎಂ. | ರಸಾಯನಶಾಸ್ತ್ರ | Academic Level 13A (ಎ.ಜಿ.ಪಿ–9000) | Academic Level 14(ಎ.ಜಿ.ಪಿ– 10000) | 19-03-2021 | 19-03-2021 |
| 50 | ಕೃಷ್ಣಮೂರ್ತಿ ಜಿ. | ರಸಾಯನಶಾಸ್ತ್ರ | Academic Level 13A (ಎ.ಜಿ.ಪಿ– 9000) | Academic Level 14 (ಎ.ಜಿ.ಪಿ – 10000) | 19-03-2021 | 19-03-2021 |
| 51 | ಯುವರಾಜ ಟಿ.ಸಿ.ಎಂ. | ರಸಾಯನಶಾಸ್ತ್ರ | In the CAS Board of appointment Meeting held on 27-08-2020 dates of eligibility for these candidates was fixed as 01-12-2012 the same was brought to the notice of present board for rectification of dates of eligibility. It was decided to take a suitable decision seeking Legal opinion and Consulting IQAC | | | |
| 52 | ಶ್ರೀ ಕಂಠ ಎಸ್. ಎ. | ರಸಾಯನಶಾಸ್ತ್ರ | | | | |
| 53 | ಸಂತೋಷಕುಮಾರ್ ಕೆ.ಟಿ. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | Academic Level 13A (ಎ.ಜಿ.ಪಿ – 9000) | Academic Level 14 (ಎ.ಜಿ.ಪಿ – 10000) | 19-03-2021 | 19-03-2021 |
| 54 | ಗೋವಿಂದರಾಜು | ಭೂ ವಿಜ್ಞಾನ | Academic Level 13A (ಎ.ಜಿ.ಪಿ–9000) | Academic Level 14 (ಎ.ಜಿ.ಪಿ 10000) | 19-03-2021 | 19-03-2021 |
| 55 | ತಿಪ್ಪೇಸ್ವಾಮಿ ಎನ್. ಬಿ. | ಸೂಕ್ಷ್ಮಾಣುಜೀವ ಶಾಸ್ತ್ರ | Academic Level 13A (ಎ.ಜಿ.ಪಿ– 9000) | Academic Level 14 (ಎ.ಜಿ.ಪಿ – 10000) | 19-03-2021 | 19-03-2021 |
| 56 | ಓಂಕಾರಪ್ಪ ಆರ್ | ಸೂಕ್ಷ್ಮಾಣುಜೀವ ಶಾಸ್ತ್ರ | Academic Level 13A (ಎ.ಜಿ.ಪಿ– 9000) | Academic Level 14 (ಎ.ಜಿ.ಪಿ – 10000) | 19-03-2021 | 19-03-2021 |
| 57 | ಮಲ್ಲಿಕಾರ್ಜುನ ಎನ್. | ಸೂಕ್ಷ್ಮಾಣುಜೀವ ಶಾಸ್ತ್ರ | Academic Level 13A (ಎ.ಜಿ.ಪಿ– 9000) | Academic Level 14 (ಎ.ಜಿ.ಪಿ – 10000) | 19-03-2021 | 19-03-2021 |

**2021–ಸಿಂ–3.06(ಐ):** School of education ಗೆ ನಿರ್ದೇಶಕರನ್ನು ನೇಮಿಸುವ ಕುರಿತು.

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.06(ಜೆ):** ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರ ನೇಮಕಾತಿ ಕುರಿತು.

ನಿರ್ಣಯ: ಮುಂದೂಡಲಾಯಿತು.

2021–ಸಿಂ–3.06(ಕೆ): ಅಧ್ಯಾಪಕೇತರ ನೌಕರರುಗಳ ಜೇಷ್ಠತಾ ಪಟ್ಟಿಯ ಕುರಿತು ರಚಿಸಿರುವ ಸಿಂಡಿಕೇಟ್ ಉಪ ಸಮಿತಿಯ ನೀಡಿರುವ ವರದಿಯ ಕುರಿತು.

ಚರ್ಚೆ: ಕುಲಸಚಿವರು ಅಧ್ಯಾಪಕೇತರ ನೌಕರರುಗಳ ಜೇಷ್ಠತಾ ಪಟ್ಟಿಯ ಕುರಿತು ಡಿ.ಪಿ.ಎ.ಆರ್ ಪರಿಣಿತರನ್ನೊಳಗೊಂಡ ಸಮಿತಿಯು ನೀಡಿರುವ ವರದಿಯನ್ನು ಸಭೆಯ ಗಮನಕ್ಕೆ ತಂದರು. ಸಮಿತಿಯ ಸದಸ್ಯರೂ ಆದ ಶ್ರೀ. ಧರ್ಮಪ್ರಸಾದ್ ಜಿ., ಹಾಗೂ ಶ್ರೀ. ರಾಮಲಿಂಗಪ್ಪ ಹೆಚ್ ಇವರುಗಳು ಮಾತನಾಡುತ್ತಾ, ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನು ಸಿದ್ಧಪಡಿಸಿರುವುದಾಗಿ ಸಭೆಗೆ ವಿವರಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಅಧ್ಯಾಪಕೇತರ ನೌಕರರುಗಳ ಜೇಷ್ಠತಾ ಪಟ್ಟಿಯ ಕುರಿತು ರಚಿಸಿರುವ ಸಿಂಡಿಕೇಟ್ ಉಪ ಸಮಿತಿಯು ನೀಡಿರುವ ವರದಿಯನ್ನು ಅಂಗೀಕರಿಸಿ ಅದರಂತೆ ಮುಂದಿನ ಕ್ರಮವಹಿಸಲು ತೀರ್ಮಾನಿಸಲಾಯಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

2021–ಸಿಂ–3.07: ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗೆ ಮುದ್ರಣ ಮತ್ತು ಲೇಖನಸಾಮಾಗ್ರಿಗಳನ್ನು ಸರಬರಾಜು ಮಾಡುವ ಸಂಬಂಧದ ಇ-ಟೆಂಡರ್ ಅಂಗೀಕರಿಸಿ ದರ ಒಪ್ಪಂದ ಮಾಡಿಕೊಳ್ಳುವ ಕುರಿತು.

ನಿರ್ಣಯ: ಮುಂದೂಡಲಾಯಿತು.

## ಹಣಕಾಸು ವಿಭಾಗ

2021–ಸಿಂ–3.08: 2020–21ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆ ಕುರಿತು.

ನಿರ್ಣಯ: ಮುಂದೂಡಲಾಯಿತು.

## ಎಸ್ಟೇಟ್ ವಿಭಾಗ

2021–ಸಿಂ–3.09: ವಿಶೇಷ ಕ್ರೀಡಾ ತರಬೇತಿ ಕೇಂದ್ರ (ಎಸ್.ಟಿಸಿ.) ಸ್ಥಾಪನೆಗೆ ಸಹ್ಯಾದ್ರಿ ಕಾಲೇಜು ಆವರಣದ ಜಮೀನನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸುವ ಕುರಿತು.

ನಿರ್ಣಯ: ಮುಂದೂಡಲಾಯಿತು.

2021–ಸಿಂ–3.10: ಆವರಣದಲ್ಲಿನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ, ವಾಹನದ ಮೂಲಕ ವಿಲೇವಾರಿ ಕಾರ್ಯಕ್ಕಾಗಿ ಸೂಕ್ತ ಗೂಡ್ಸ್ ವಾಹನವನ್ನು ಒದಗಿಸುವ ಸಂಬಂಧ ಇ-ಟೆಂಡರ್ ಮೂಲಕ ಕ್ರಮಕೈಗೊಂಡಿರುವ ಕುರಿತು.

ನಿರ್ಣಯ: ಮುಂದೂಡಲಾಯಿತು.

2021–ಸಿಂ–3.11: ಶಿವಮೊಗ್ಗ ನಗರದಲ್ಲಿರುವ ಕುವೆಂಪು ವಿಶ್ವವಿದ್ಯಾಲಯದ ಸಹ್ಯಾದ್ರಿ ಕಾಲೇಜಿಗೆ ಸೇರಿದ ಸ್ಥಳದಲ್ಲಿ ಹಲವಾರು ಜನಾಂಗಗಳು ವಲಸೆ ಬಂದು ನೆಲೆಸಿರುವ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಣೆ ಮಾಡಿರುವ ಬಗ್ಗೆ.

ನಿರ್ಣಯ: ಮುಂದೂಡಲಾಯಿತು.

## ಪರೀಕ್ಷಾ ವಿಭಾಗ

**2021-ಸಿಂ-3.12:** ಸ್ನಾತಕೋತ್ತರ ಕೇಂದ್ರ ಚಿಕ್ಕಮಗಳೂರಿನಲ್ಲಿ ಸ್ನಾತಕ ಪದವಿ ಪರೀಕ್ಷೆಯ ಮೌಲ್ಯಮಾಪನ ಕೇಂದ್ರವನ್ನು ಆರಂಭಿಸಿರುವ ಕುರಿತು.

ಚರ್ಚೆ: ಕುಲಸಚಿವ(ಪರೀಕ್ಷಾಂಗ)ರವರು ವಿಷಯವನ್ನು ಮಂಡಿಸಿ ಮಾತನಾಡುತ್ತಾ ಚಿಕ್ಕಮಗಳೂರಿನಲ್ಲಿ ಸ್ನಾತಕ ಪದವಿಯ ಪರೀಕ್ಷೆಯ ಮೌಲ್ಯಮಾಪನ ಕೇಂದ್ರವನ್ನು ಆರಂಭಿಸುವುದರಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲವೆಂದರು. ಇದನ್ನು ಪ್ರಾರಂಭಿಸುವುದರಿಂದ ಚಿಕ್ಕಮಗಳೂರಿನ ಅಧ್ಯಾಪಕರುಗಳಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದರು. ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡುತ್ತಾ, ಮೌಲ್ಯಮಾಪನ ಕೇಂದ್ರವನ್ನು ಪ್ರಾರಂಭಿಸುವುದರಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದರು. ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ., ಇವರು ಮಾತನಾಡುತ್ತಾ ಮೌಲ್ಯಮಾಪನ ಕೇಂದ್ರವಾದ ಐ.ಡಿ.ಎಸ್.ಜಿ. ಕಾಲೇಜಿನಲ್ಲಿ ಉತ್ತರ ಪತ್ರಿಕೆಗಳನ್ನು ಇಡಲು ಭದ್ರತೆಯನ್ನು ಪರಿಶೀಲಿಸಬೇಕು ಎಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು(ಪರೀಕ್ಷಾಂಗ)ರವರು ತಾವು ಈಗಾಗಲೇ ಐ.ಡಿ.ಎಸ್.ಜಿ. ಕಾಲೇಜಿಗೆ ಭೇಟಿ ನೀಡಿ ಭದ್ರತಾ ವ್ಯವಸ್ಥೆ ಇತ್ಯಾದಿಗಳನ್ನು ಪರಿಶೀಲಿಸಿರುವುದಾಗಿ ತಿಳಿಸಿ ಎಲ್ಲಾ ವ್ಯವಸ್ಥಿತವಾಗಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ಕೇಂದ್ರ ಚಿಕ್ಕಮಗಳೂರಿನಲ್ಲಿ ಸ್ನಾತಕ ಪದವಿ ಪರೀಕ್ಷೆಯ ಮೌಲ್ಯವಾಪನ ಕೇಂದ್ರವನ್ನು ಆರಂಭಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡಿ ಸ್ಥಿರೀಕರಿಸಲಾಯಿತು.

**2021-ಸಿಂ-3.12(ಎ):** ಪರೀಕ್ಷಾ ಕಾರ್ಯಗಳನ್ನು ಹೊರಗುತ್ತಿಗೆ ಮೂಲಕ ನಿರ್ವಹಿಸಲು ಕರೆಯಲಾದ ಟೆಂಡರ್ ಕುರಿತು.

ನಿರ್ಣಯ: ಮುಂದೂಡಲಾಯಿತು.

**2021-ಸಿಂ-3.12(ಬಿ):** M/s KEONICS Bangalore, - ಇವರು Online Examination Mangement system ಅಳವಡಿಸಲು ಸಲ್ಲಿಸಿರುವ ಪ್ರಸ್ತಾವನೆ ಅನುಮೋದನೆ ಕುರಿತು.

ನಿರ್ಣಯ: ಮುಂದೂಡಲಾಯಿತು.

## ಅಭಿವೃದ್ಧಿ ವಿಭಾಗ

**2021-ಸಿಂ-3.13:** ಬಾವುಲಿ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ, BAT Conservation India Trust Bangalore – ಇವರೊಂದಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ವಿಭಾಗ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.

ನಿರ್ಣಯ: ಮುಂದೂಡಲಾಯಿತು.

**2021-ಸಿಂ-3.14:** ಸೈನ್ಯ ಇತಿಹಾಸಕ್ಕೆ ಸಂಬಂಧಿಸಿದಂತೆ ಅಧ್ಯಯನ ಪೀಠ ಸ್ಥಾಪಿಸುವ ಕುರಿತು.

ನಿರ್ಣಯ: ಮುಂದೂಡಲಾಯಿತು.

**2021-ಸಿಂ-3.14:** ಶ್ರೀ ಪ್ರಮೋದ್ ಮಳ್ಳಗಟ್ಟಿ ಅಧ್ಯಯನ ಪೀಠ ಸ್ಥಾಪಿಸುವ ಕುರಿತು.

ನಿರ್ಣಯ: ಮುಂದೂಡಲಾಯಿತು.

## ಶೈಕ್ಷಣಿಕ ವಿಭಾಗ

**2021–ಸಿಂ–3.15:** "ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಲ್ಡನ್ ಜುಬಲಿ" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆ ಬಗ್ಗೆ (ವಿಜ್ಞಾನ ನಿಕಾಯದ ಎಂ.ಎಸ್ಸಿ., ಗಣಿತಶಾಸ್ತ್ರ ಅಧ್ಯಯನ)

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.16:** "ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಲ್ಡನ್ ಜುಬಲಿ" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆ ಬಗ್ಗೆ (ವಾಣಿಜ್ಯ ನಿಕಾಯದ ಎಂ.ಕಾಂ., ಅಧ್ಯಯನ)

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.17:** "ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಲ್ಡನ್ ಜುಬಲಿ" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣ ಪದಕ ಸ್ಥಾಪನೆ ಬಗ್ಗೆ (ವಾಣಿಜ್ಯ ನಿಕಾಯದ ಎಂ.ಬಿ.ಎ.,. ಅಧ್ಯಯನ)

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.17(ಎ):** ವಿದ್ಯಾರ್ಥಿಗಳಿಗೆ ಅಪಘಾತ ರಕ್ಷಣಾ ವಿಮಾ ಯೋಜನೆಯ ಸಂಬಂಧ ಪಾಲಿಸಿ ಮೊತ್ತವನ್ನು ಹೆಚ್ಚಿಸುವ ಬಗ್ಗೆ.

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.17(ಬಿ):**"ಪ್ರೊ. ಎ. ರಾಮೇಗೌಡ, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಕ್ಯಾಂಪಸ್" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.17(ಸಿ):**ಸರ್.ಎಂ.ವಿ. ಸರ್ಕಾರ ವಿಜ್ಞಾನ ಕಾಲೇಜು, ಭದ್ರಾವತಿ ಈ ಕಾಲೇಜಿನ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಣ ಕುರಿತು.

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.17(ಡಿ):** ಸ್ನಾತಕ ಪದವಿಯ ಪ್ರವೇಶಾತಿ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡುವ ಕುರಿತು.

ಚರ್ಚೆ: ಸದಸ್ಯರಾದ ಶ್ರೀ ಕರುಣಾಕರ ಬಿ., ಇವರು ಮಾತನಾಡುತ್ತಾ ಹೊರ ವಿಶ್ವವಿದ್ಯಾಲಯಗಳಲ್ಲಿ ಪದವಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಮಧ್ಯಂತರದಲ್ಲಿ ಪದವಿ ವ್ಯಾಸಂಗವನ್ನು ನಮ್ಮ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿಕೊಂಡು, ಪ್ರವೇಶ ಪಡೆಯುವಾಗ ಹಿಂದಿನ ಸೆಮಿಸ್ಟರ್‌ಗಳ ಎಲ್ಲಾ ವಿಷಯಗಳನ್ನು ಸಂಪೂರ್ಣವಾಗಿ ಉತ್ತೀರ್ಣವಾಗಿರಬೇಕು ಎಂದು ಪ್ರವೇಶ ನಿರಾಕರಿಸಲಾಗುತ್ತಿದೆ. ಆದರೆ ಯು.ಜಿ.ಸಿ. ನಿಯಮಾವಳಿಗಳಲ್ಲಿ ಒಂದು ವೇಳೆ ಹಿಂದಿನ ವಿಶ್ವವಿದ್ಯಾಲಯಗಳಲ್ಲಿ ಯಾವುದಾದರೂ ವಿಷಯ ಬಾಕಿ ಉಳಿಸಿಕೊಂಡಿದ್ದಲ್ಲಿ ಅದಕ್ಕೆ ತತ್ಸಮಾನವಾದ ವಿಷಯ ನಮ್ಮ ವಿಶ್ವವಿದ್ಯಾಲಯದಲ್ಲಿ ಇದ್ದಲ್ಲಿ ಅದನ್ನು ತೆಗೆದುಕೊಳ್ಳಲು ಅವಕಾಶ ನೀಡಬಹುದಾಗಿದ್ದು, ಒಂದು ವೇಳೆ ತತ್ಸಮಾನ ವಿಷಯ ಇಲ್ಲವಾದಾಗ ಹಿಂದಿನ ವಿಶ್ವವಿದ್ಯಾಲಯದಲ್ಲಿ ಬಾಕಿ ಇರುವ ವಿಷಯಗಳನ್ನು ಉತ್ತೀರ್ಣತೆ ಹೊಂದುವ ಷರತ್ತಿಗೊಳಪಟ್ಟು ಪ್ರವೇಶವನ್ನು ಮುಂದಿನ ಪದವಿ ತರಗತಿಗಳಿಗೆ ನೀಡಲು ಅವಕಾಶವಿದ್ದು, ಬೇರೆ ವಿಶ್ವವಿದ್ಯಾಲಯಗಳು ಇದನ್ನು ಅಳವಡಿಸಿಕೊಂಡಿರುವಂತೆ, ನಮ್ಮ ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸಬೇಕಾಗಿದೆ ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಸ್ನಾತಕ ಪದವಿಯ ಪ್ರವೇಶಾತಿ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು.

**2021–ಸಿಂ–3.17(ಇ):** Design Delopment Implementation & Maintainance of Fraternity Platform Infrastructure (FPI)ನ್ನು ವಿಶ್ವವಿದ್ಯಾಲಯದಲ್ಲಿ ಆರಂಭಿಸಲು ಉದ್ದೇಶಿಸಿರುವ ಬಗ್ಗೆ.

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.17(ಎಫ್):** 2021–22ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಪ್ರಥಮ ವರ್ಷದ ಸ್ನಾತಕೋತ್ತರ ಪದವಿಗಳ ಶುಲ್ಕಗಳನ್ನು ಪುನರ್ ರಚಿಸುವ ಕುರಿತು.

ನಿರ್ಣಯ: ಮುಂದೂಡಲಾಯಿತು.

## ದೂರಶಿಕ್ಷಣ ನಿರ್ದೇಶನಾಲಯ

**2021–ಸಿಂ–3.18:** ಅಧ್ಯಯನ ಸಾಮಾಗ್ರಿಗಳನ್ನು ಮುದ್ರಿಸುವ ಕುರಿತು.

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.18(ಎ):** ದಿನಾಂಕ:07–04–2021 ರಂದು ಜರುಗಿದ ಮೇಲ್ವಿಚಾರಣಾ ಸಮಿತಿ ಸಭೆಯ ನಡಾವಳಿ ಅನುಮೋದನೆ ಕುರಿತು.

ನಿರ್ಣಯ: ಮುಂದೂಡಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್

**2021–ಸಿಂ–3.19:** 2021–22ನೇ ಸಾಲಿನಿಂದ ಅನ್ವಯವಾಗುವಂತೆ ಸಂಯೋಜನೆ ಶುಲ್ಕಗಳನ್ನು ಪರಿಷ್ಕರಿಸಿರುವ ಬಗ್ಗೆ.

ನಿರ್ಣಯ: ಮುಂದೂಡಲಾಯಿತು.

## ದೈಹಿಕ ಶಿಕ್ಷಣ ವಿಭಾಗ

**2021–ಸಿಂ–3.19(ಎ):** ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿ ಅನುಮೋದನೆಗಾಗಿ.

ನಿರ್ಣಯ: ಮುಂದೂಡಲಾಯಿತು.

## ಯು.ಸಿ.ಸಿ.ಎಫ್

**2021–ಸಿಂ–3.19(ಬಿ):** ವಿಶ್ವವಿದ್ಯಾಲಯದ ಕ್ಯಾಂಪಸ್ ನೆಟ್‌ವರ್ಕ್‌ನ ಸುರಕ್ಷತೆಗಾಗಿ SOPHOS UTM Firewall Software License ನವೀಕರಣ ಮತ್ತು Firewall ಪರಿಕರದ AMC ನವೀಕರಿಸುವ ಸಂಬಂಧ ಖರೀದಿಸುವ ಬಗ್ಗೆ.

ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.20:** <u>ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:</u>

1) ಶ್ರೀ ರಾಮಲಿಂಗಪ್ಪ ಹೆಚ್.
   ನಿರ್ಣಯ: ಮುಂದೂಡಲಾಯಿತು.

2) ಪ್ರೊ. ಕರುಣಾಕರ ಬಿ.
   ನಿರ್ಣಯ: ಮುಂದೂಡಲಾಯಿತು.

3) ಶ್ರೀ ಧರ್ಮಪ್ರಸಾದ್ ಜಿ.
   ನಿರ್ಣಯ: ಮುಂದೂಡಲಾಯಿತು.

4) ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ
   ನಿರ್ಣಯ: ಮುಂದೂಡಲಾಯಿತು.

**2021–ಸಿಂ–3.21:** ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ

--

**2021–ಸಿಂ–3.22:** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು